## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 80 |
| ಸದಸ್ಯರ ಹೆಸರು | ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 02.02.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಹಾಸನ ಜಿಲ್ಲೆಯಲ್ಲಿ ಎಷ್ಟು ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದೆ; ಇವುಗಳಲ್ಲಿ ಎಷ್ಟು ಮರಳು ನಿಕ್ಷೇಪಗಳನ್ನು ಹರಾಜು ಮುಖಾಂತರ ವಿಲೇವಾರಿ ಮಾಡಲಾಗಿದೆ; ಇವುಗಳನ್ನು ಹರಾಜಿನಲ್ಲಿ ಪಡೆದ ಗುತ್ತಿಗೆದಾರರು ಯಾರು; (ಕಳೆದ 3 ವರ್ಷಗಳ ನಿಕ್ಷೇಪವಾರು ಮಾಹಿತಿ ನೀಡುವುದು) | ➢ ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು ಮತ್ತು ಬೇಲೂರು ತಾಲ್ಲೂಕು ವ್ಯಾಪ್ತಿಯ ಹೇಮಾವತಿ ನದಿ ಹಾಗೂ ಇತರೆ ಹಳ್ಳಗಳ ಪಾತ್ರಗಳಲ್ಲಿ ಒಟ್ಟು 40 ಮರಳು ನಿಕ್ಷೇಪಗಳ ಬ್ಲಾಕ್ ಗಳನ್ನು ಗುರುತಿಸಲಾಗಿರುತ್ತದೆ.<br>➢ ಸದರಿ ಗುರುತಿಸಲಾಗಿರುವ 40 ಮರಳು ಬ್ಲಾಕುಗಳ ಪೈಕಿ 04 ಮರಳು ಬ್ಲಾಕುಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಲಾಗಿರುತ್ತದೆ. 36 ಮರಳು ಬ್ಲಾಕುಗಳನ್ನು ಟೆಂಡರ್–ಕಂ–ಇ–ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿರುತ್ತದೆ.<br>➢ ಟೆಂಡರ್–ಕಂ–ಇ–ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿರುವ 36 ಮರಳು ಬ್ಲಾಕುಗಳ ಪೈಕಿ 05 ಮರಳು ಬ್ಲಾಕುಗಳಿಗೆ ಕನಿಷ್ಠ ಬಿಡ್ಡುದಾರರು ಇಲ್ಲದೇ ಇದ್ದುದ್ದರಿಂದ, ಸದರಿ ಮರಳು ಬ್ಲಾಕುಗಳ ಹರಾಜು ಪ್ರಕ್ರಿಯೆಯನ್ನು ಕೈಬಿಡಲಾಗಿರುತ್ತದೆ.<br>➢ ಟೆಂಡರ್ ಆದ 31 ಮರಳು ಬ್ಲಾಕುಗಳಲ್ಲಿ 08 ಮರಳು ಬ್ಲಾಕುಗಳ ಬಿಡ್ಡುದಾರರು ಅತೀ ಹೆಚ್ಚಿನ ಮೊತ್ತಕ್ಕೆ ಬಿಡ್ಡು ಮಾಡಿದ್ದರಿಂದ ಗ್ರಾಹಕರಿಗೆ ಮರಳಿನ ಮಾರಾಟ ದರವು ಅಧಿಕವಾಗುವ ಕಾರಣದಿಂದ ಜಿಲ್ಲಾ ಮರಳು ಸಮಿತಿಯಿಂದ ಸದರಿ ಬಿಡ್ಡುಗಳನ್ನು ರದ್ದುಪಡಿಸಲಾಗಿರುತ್ತದೆ.<br>➢ ಉಳಿಕೆ 23 ಮರಳು ಬ್ಲಾಕುಗಳನ್ನು ಸಾರ್ವಜನಿಕ ಟೆಂಡರ್–ಕಂ–ಇ–ಹರಾಜು ಮೂಲಕ 05 ವರ್ಷಗಳ ಅವಧಿಗೆ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br>ಹರಾಜು ಮೂಲಕ ಗುತ್ತಿಗೆ ಪಡೆದ ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತವೆ. |

| ಕ್ರ ಸಂ | ತಾಲ್ಲೂಕು | ಮರಳು ಗುತ್ತಿಗೆದಾರರ ಹೆಸರು | ಮರಳು ಬ್ಲಾಕ್‌ಗಳ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಗುತ್ತಿಗೆ ಮಂಜೂರಾದ ದಿನಾಂಕ |
|---|---|---|---|---|---|
| 1. | ಸಕಲೇಶ ಪುರ | ಆರ್.ನಾಗರಾಜಪ್ಪ | ಕೌಡಳ್ಳಿ | 20–00 | 28.03.2018 |
| 2. | | ಡಿ.ಟಿ.ಪ್ರಕಾಶ್ | ಮಾವಿನಹಳ್ಳಿ | 13–00 | 05.03.2018 |
| 3. | | ಹೆಚ್.ಟಿ.ವೆಂಕಟೇಶ್ | ಐಗೂರು–1 | 7–00 | 26.03.2018 |
| 4. | | ಸತ್ತಿಗಾಲಆರ್.ಮಹೇಶ್ | ತೊಂತಲಾಪುರ–2 | 5–00 | 14.02.2018 |
| 5. | | ಅರುಣ್‌ರಾವ್. ಎಸ್.ಆರ್ | ಐಗೂರು–2 | 7–20 | 08.02.2018 |
| 6. | | ಹೆಚ್.ಆರ್.ಪರಮೇಶ್ | ನಿಡಿಗೆರೆ | 6–10 | 19.02.2018 |
| 7. | | ರಾಘವೇಂದ್ರ.ಎಂ.ಎ | ಹಾಲೇಬೇಲೂರು | 20–00 | 05.03.2018 |
| 8. | | ಕೆ.ಎಸ್.ಅರವಿಂದ | ಮಳಲಿ | 15–00 | 07.03.2018 |

| | | | | |
|---|---|---|---|---|
| 9. | | ಎಂ.ನಾಗರಾಜು | ಹೆನ್ನಲಿ–1 | 8–00 | 01.03.2018 |
| 10. | | ಹೆಚ್.ಟಿ.ವೆಂಕಟೇಶ್ | ಲಕ್ಕುಂದ | 9–00 | 08.02.2018 |
| 11. | | ಸಯ್ಯದ್ ಹಫೀಜ್ | ಕಣಗಲಮನೆ | 22–00 | 05.11.2018 |
| 12. | | ಹೆಚ್.ಕೆ.ಮಹೇಂದ್ರ | ಹೆನ್ನಲಿ–2 | 10–00 | 09.02.2018 |
| 13. | | ಪರ್ವತಯ್ಯ | ಮಾಗಲು | 14–00 | 05.04.2018 |
| 14. | | ಹೆಚ್.ಆರ್.ಪರಮೇಶ್ | ಬ್ಯಾಗಡಿಹಳ್ಳಿ | 6–00 | 08.02.2018 |
| 15. | ಆಲೂರು | ಷಣ್ಮುಖ | ಹೆಮ್ಮಿಗೆ–1 | 13–00 | 27.04.2018 |
| 16. | | ಮಹಮ್ಮದ್ ಇಕ್ಬಾಲ್ | ಹರೀಹಳ್ಳಿ–1 | 13–00 | 03.02.2018 |
| 17. | | ದಾನಿ.ಸಿ.ಎನ್ | ಹ್ಯಾರಗಳಲೆ | 13–00 | 23.05.2018 |
| 18. | | ಡಿ.ಆರ್.ಮಹೇಶ್ | ಕೊಡಗಲವಾಡಿ | 9–00 | 24.04.2018 |
| 19. | | ಪರ್ವತಯ್ಯ | ಕಾಗನೂರು | 5–00 | 01.03.2018 |
| 20. | ಬೇಲೂರು | ಜಾಕೀರ್ ಹುಸ್ಸೇನ್ | ಹೊಸಹಳ್ಳಿ | 16–00 | 27.06.2018 |
| 21. | | ಹೆಚ್.ಆರ್. ಚಂದ್ರೇಗೌಡ | ತುಂಬದೇವರಹಳ್ಳಿ | 18–00 | 02.06.2018 |
| 22 | | ಸಿ.ಆರ್.ಧರ್ಮಪ್ರಕಾಶ್ | ನಾರ್ವೆ | 16–00 | 30.06.2018 |
| 23. | | ಕುಮಾರ್.ಹೆಚ್.ಎನ್ | ಗೊರವನ ಹಳ್ಳಿ | 20–00 | 27.06.2018 |

ಆ. ಹಾಸನ ಜಿಲ್ಲೆಯಲ್ಲಿ ಅಕ್ರಮ ಮರಳು ದಾಸ್ತಾನು ಪ್ರಕರಣಗಳು ಬೆಳಕಿಗೆ ಬಂದಿವೆಯೇ; ಬಂದಿದ್ದಲ್ಲಿ, ಎಷ್ಟು ಪ್ರಮಾಣದ ಮರಳನ್ನು ಅಕ್ರಮವಾಗಿ ಸಂಗ್ರಹಿಸಲಾಗಿತ್ತು; ಯಾರು ಸಂಗ್ರಹಿಸಿದ್ದಾರೆ; ಇದಕ್ಕೆ ವಿಧಿಸಿರುವ ದಂಡವೆಷ್ಟು; (ಕಳೆದ 3 ವರ್ಷಗಳ ಪ್ರಕರಣವಾರು ಮಾಹಿತಿ ನೀಡುವುದು)

**ಬಂದಿರುತ್ತದೆ.**

ಕಳೆದ 3 ವರ್ಷಗಳಲ್ಲಿ ಅನಧಿಕೃತ ಮರಳು ದಾಸ್ತಾನು ಮಾಡಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| **ವರ್ಷ** | **ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ** | **ವಶಪಡಿಸಿಕೊಂಡ ಮರಳು ದಾಸ್ತಾನಿನ ಪ್ರಮಾಣ (ಮೆ.ಟನ್ ಗಳಲ್ಲಿ)** | **ಸಂಗ್ರಹಿಸಲಾದ ದಂಡ (ರೂ. ಲಕ್ಷಗಳಲ್ಲಿ)** | **ದಾಖಲಿಸಲಾದ ಪ್ರಕರಣಗಳ ಸಂಖ್ಯೆ** |
|---|---|---|---|---|
| 2018–19 | 1 | 8,235 | 200.29 | 0 |
| 2019–20 | 2 | 253 | 0.00 | 2 |
| 2020–21 (ಡಿಸೆಂಬರ್ 2020 ರ ಅಂತ್ಯಕ್ಕೆ) | 4 | 618 | 6.10 | 1 |
| **ಒಟ್ಟು** | **7** | **9,106** | **206.39** | **3** |

ಅನಧಿಕೃತ ಮರಳು ಸಂಗ್ರಹಿಸಿದ ವ್ಯಕ್ತಿಗಳು / ಕಂಪನಿಗಳ ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ

ಇ. ಹಾಸನ ಜಿಲ್ಲೆಯಲ್ಲಿ ಅಕ್ರಮ ಮರಳು ದಾಸ್ತಾನುದಾರರ ವಿರುದ್ಧ ಮತ್ತು ಅಕ್ರಮ ಮರಳು ದಾಸ್ತಾನು ಮಾಡದಂತೆ ತಡೆಯಲು ವಿಫಲರಾಗಿರುವ

ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ 03 ವರ್ಷಗಳಲ್ಲಿ ಅನಧಿಕೃತ ಮರಳು ದಾಸ್ತಾನು ತಡೆಗಟ್ಟಲು ವಿಫಲವಾಗಿರುವ ಅಧಿಕಾರಿಗಳ ಕುರಿತಂತೆ ಯಾವುದೇ ಪ್ರಕರಣಗಳು ಇರುವುದು ಕಂಡು ಬಂದಿರುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ಅಕ್ರಮ ಮರಳು ದಾಸ್ತಾನು ಮಾಡದಂತೆ ತಡೆಗಟ್ಟಲು ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ಹಾಸನ, ಬೇಲೂರು, ಆಲೂರು ಮತ್ತು ಸಕಲೇಶಪುರ ತಾಲ್ಲೂಕಗಳಲ್ಲಿ ಮರಳು ಸಾಗಾಣಿಕಾ ವಿಚಕ್ಷಣಾ ದಳ ರಚಿಸಿಕೊಂಡು ಜಿಲ್ಲೆಯಾದ್ಯಂತ ಕಾರ್ಯ ನಿರ್ವಹಿಸಲಾಗುತ್ತಿದೆ.

ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಪ್ರಕರಣವಾರು ಮಾಹಿತಿ ನೀಡುವುದು; ಅಕ್ರಮ ಮರಳು ದಾಸ್ತಾನು ಮಾಡುವುದನ್ನು ತಡೆಗಟ್ಟಲು ಸರ್ಕಾರವು ವಹಿಸಿರುವ ಮುಂಜಾಗ್ರತಾ ಕ್ರಮಗಳೇನು? (ವಿವರ ನೀಡುವುದು)

ಮುಂದುವರೆದು, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ವತಿಯಿಂದ ಆಯಾಕಟ್ಟಿನ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ನಿರ್ಮಿಸಿಕೊಂಡು 24x7 ರ ಮಾದರಿಯಲ್ಲಿ ತನಿಖಾ ಠಾಣೆಗಳಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿ, ಮರಳು ಗಣಿಗಾರಿಕೆ ಚಟುವಟಿಕೆಗಳ ಕುರಿತು ನಿಗಾ ವಹಿಸಲಾಗುತ್ತಿದೆ.

ತನಿಖಾ ಠಾಣೆಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ. | ತಾಲ್ಲೂಕು | ತನಿಖಾ ಠಾಣೆಗಳ ಸ್ಥಳ |
|---|---|---|
| 1. | ಸಕಲೇಶಪುರ | ದೋಣಿಗಾಲ |
| 2. | | ಗೋಪಾಲಪುರ |
| 3. | | ಬಾಳ್ಳುಪೇಟೆ (ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ತೆರವುಗೊಳಿಸಿದೆ) |
| 4. | | ಹೊಂಕರವಳ್ಳಿ |
| 5. | | ಮಾಗಲು |
| 6. | | ಚಂಗಡಿಹಳ್ಳಿ |
| 7. | | ಹುಲಗತ್ತೂರು |
| 8. | | ವಣಗೂರು-ಕೂಡುರಸ್ತೆ |
| 9. | ಆಲೂರು | ಕೆ. ಹೊಸಕೋಟೆ |
| 10. | | ರಾಯರಕೊಪ್ಪಲು |
| 11. | | ಅರೇಬಿಕಾ ಸ್ಕೂಲ್ ಹತ್ತಿರ (ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ತೆರವುಗೊಳಿಸಿದೆ) |
| 12. | | ಗದ್ದೆಕೊಪ್ಪಲು |
| 13. | | ಹರೀಹಳ್ಳಿ ಟೆಂಪಲ್ |
| 14. | ಬೇಲೂರು | ಬೇಲೂರು ಟೌನ್ |
| 15. | | ಚೀಕನಹಳ್ಳಿ |

ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

- ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.
- ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ.
- ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ಮತ್ತು ದಾಸ್ತಾನನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22 ರಡಿಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 31-Rರ ಉಪ ನಿಯಮ 13 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.

| | | |
|---|---|---|
| | | • ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಗಳಿಂದ ರಾಜ್ಯದಲ್ಲಿ ಆಯಾಕಟ್ಟಿನ ಪ್ರದೇಶಗಳಲ್ಲಿ ಮರಳು ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.<br>• ಸರ್ಕಾರವು ದಿನಾಂಕ 30.06.2020 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 43ಕ್ಕೆ ತಿದ್ದುಪಡಿ ತಂದಿದ್ದು ಸದರಿ ತಿದ್ದುಪಡಿ ನಿಯಮದಲ್ಲಿ ಅನಧಿಕೃತ ಮರಳು ಹಾಗೂ ಇತರೆ ಉಪ ಖನಿಜಗಳ ಸಾಗಾಣಿಕೆಯಡಿಯಲ್ಲಿ ಹೆಚ್ಚಿನ ದಂಡದ ಮೊತ್ತವನ್ನು ವಸೂಲಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. |

ಸಂಖ್ಯೆ ಸಿಐ 35 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಅನುಬಂಧ-1

## ಅನಧಿಕೃತ ಮರಳು ಸಂಗ್ರಹಿಸಿದ ವ್ಯಕ್ತಿಗಳು / ಕಂಪನಿಗಳ ವಿವರಗಳು

| ಕ್ರ. ಸಂ | ವರ್ಷ/ ದಿನಾಂಕ | ಮರಳು ದಾಸ್ತಾನು ಮಾಡಿರುವ ವ್ಯಕ್ತಿ/ಕಂಪನಿ ವಿವರ | ತಾಲ್ಲೂಕು/ ಗ್ರಾಮ/ ಸಂ.ನ | ವಶಪಡಿಸಿಕೊಂಡ ಮರಳು ದಾಸ್ತಾನು ವಿವರ (ಮೆ.ಟನ್‌ಗಳಲ್ಲಿ) | ಮಾನ್ಯ ನ್ಯಾಯಾಲದಲ್ಲಿ ದಾಖಲಿಸಿದ ಮೊಕದ್ದಮೆ / ವಿಧಿಸಿರುವ ದಂಡದ ಮೊತ್ತ (ಲಕ್ಷ.ರೂ.ಗಳಲ್ಲಿ) |
|---|---|---|---|---|---|
| 1. | 2018-19 ದಿ:10.01.2019 | ಮೆ\|\| ಓಸಿಯನ್ ಕನ್ಸ್‌ಟ್ರಕ್ಷನ್ಸ್ ಇಂಡಿಯಾ ಪ್ರೈ. ಲಿ. | ಸಕಲೇಶಪುರ ತಾಲ್ಲೂಕು, ಅರಕೆರೆ ಗ್ರಾಮದ ಸರ್ವೆ ನಂ. 298/1 | 8,235 | ರೂ. 200.29 |
| 2. | 2019-20 ದಿ:29.07.2019 | ಶ್ರೀ ಚಿಕ್ಕವೀರೇಗೌಡ ಕೋಂ. ವೀರಪ್ಪಗೌಡ ಬಿನ್ ಲೇ\|\|. ಸೋಮೇಗೌಡ | ಆಲೂರು ತಾಲ್ಲೂಕು, ಹ್ಯಾರಗಳಲೆ ಗ್ರಾಮದ ಸರ್ವೆ ನಂ. 3 | 60 | ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಲೂರು |
| 3. | 2019-20 ದಿ: 13.03.2020 | ಶ್ರೀ. ಕರುಣಾಸಾಗರ, ಪೂರ್ಣೇಶ & ಧರ್ಮೇಶ ಹಾಗೂ ಇತರರು | ಬೇಲೂರು ತಾಲ್ಲೂಕು ಮರೂರು ಗ್ರಾಮದ ಸರ್ವೆ ನಂ. 63 | 193 | ಬೇಲೂರು ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 62/2020 |
| 4. | 2020-21 ದಿ:01.05.2020 | ಬೇಲೂರು ತಾಲ್ಲೂಕು ಜಿಣ್ಣಗನಹಳ್ಳಿ ಗ್ರಾಮದ ಠಾಣಾ | - | 20 | ರೂ. 0.22 ಎಸ್. ಆರ್. ದರದಂತೆ ವಿಲೇ ಮಾಡಲಾಗಿದೆ. |
| 5. | 2020-21 ದಿ: 14.05.2020 | ಸಕಲೇಶಪುರ ತಾಲ್ಲೂಕು ರಾಮೇನಹಳ್ಳಿ ಹಾಲೆಬೇಲೂರು ಗ್ರಾಮ ವ್ಯಾಪ್ತಿ ಸ.ನಂ. 135 ರ ಸರ್ಕಾರಿ ಪ್ರದೇಶದಲ್ಲಿ | - | 219 | ರೂ. 2.22 ಎಸ್. ಆರ್. ದರದಂತೆ ವಿಲೇ ಮಾಡಲಾಗಿದೆ. |
| 6. | 2020-21 ದಿ:04.07.2020 | ಆಲೂರು ತಾಲ್ಲೂಕು ಕರೀಗೌಡನಹಳ್ಳಿ ಗ್ರಾಮದ ಸರ್ವೆ ನಂ. 1, 11, 12, 18ರ ಸರ್ಕಾರಿ ಪ್ರದೇಶದಲ್ಲಿ | - | 359 | ರೂ. 3.65 ಎಸ್. ಆರ್. ದರದಂತೆ ವಿಲೇ ಮಾಡಲಾಗಿದೆ. |
| 7. | 2020-21 ದಿ:16.07.2020 | ಚನ್ನರಾಯಪಟ್ಟಣ ತಾಲ್ಲೂಕು, ಎ.ಕಾಳೇನಹಳ್ಳಿ ಗ್ರಾಮದ ಸರ್ವೆ ನಂ.68/1ಸಿ, 68/2ರ | - | 20 | ಜೆ.ಎಂ.ಎಫ್.ಸಿ. ನ್ಯಾಯಾಲಯ, ಚನ್ನರಾಯಪಟ್ಟಣ |

Deputy Director (Min. Admn)

CT 35 MMN 2021